# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 902 (924) |
| ಮಾನ್ಯ ಸದಸ್ಯರ ಹೆಸರು | ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 15-12-2025 |
| ಉತ್ತರಿಸಬೇಕಾದ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕಳೆದ 1 ವರ್ಷದಲ್ಲಿ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ಅನುಕಂಪ ಆಧಾರದ ಮೇಲೆ ಎಷ್ಟು ಜನರಿಗೆ ಉದ್ಯೋಗ ಒದಗಿಸಲಾಗಿದೆ: (ಮಾಹಿತಿ ನೀಡುವುದು)</td><td>ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಳೆದ 01 ವರ್ಷದಲ್ಲಿ ಅನುಕಂಪ ಆಧಾರದ ಮೇಲೆ 349 ಜನರಿಗೆ ಉದ್ಯೋಗ ಒದಗಿಸಲಾಗಿದೆ.
<table>
<tr><th>ಕ್ರ. ಸಂ</th><th>ವೃಂದ</th><th>ನೇಮಕಾತಿ ನೀಡಿರುವ ಹುದ್ದೆಗಳ ಸಂಖ್ಯೆ</th></tr>
<tr><td>01</td><td>ಪ್ರಥಮ ದರ್ಜೆ ಸಹಾಯಕ</td><td>118</td></tr>
<tr><td>02</td><td>ದ್ವಿತೀಯ ದರ್ಜೆ ಸಹಾಯಕ</td><td>122</td></tr>
<tr><td>03</td><td>ಗ್ರೂಪ್ -ಡಿ</td><td>104</td></tr>
<tr><td>04</td><td>ಆರೋಗ್ಯ ನಿರೀಕ್ಷಣಾಧಿಕಾರಿ</td><td>1</td></tr>
<tr><td>05</td><td>ಕಿರಿಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ</td><td>3</td></tr>
<tr><td>06</td><td>ನೇತ್ರಾಧಿಕಾರಿ</td><td>1</td></tr>
<tr><td colspan="2">ಒಟ್ಟು</td><td>349</td></tr>
</table>
</td></tr>
<tr><td>(ಆ)</td><td>ಅನುಕಂಪ ಆಧಾರದ ಮೇಲೆ ನೌಕರಿ ಪಡೆಯುವ ಸಂಬಂದ ಬಂದಂತ ಮನವಿಗಳು/ ಕಡತಗಳು ಇಲಾಖೆಯಲ್ಲಿ ವಿಲೇವಾರಿ ಮಾಡದೇ ವಿಳಂಬವಾಗುತ್ತಿದ್ದು, ಕುಟುಂಬದ ಸದಸ್ಯರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಮನವಿಗಳು/ ಕಡತಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು:</td><td>ಬಂದಿದೆ.<br><br>ಅನುಕಂಪ ಆಧಾರದ ಮೇಲೆ ನೌಕರಿ ಪಡೆಯುವ ಸಂಬಂದ ಬಂದಂತ ಮನವಿಗಳು/ ಕಡತಗಳನ್ನು ವಿಳಂಬ ಮಾಡದೇ ನಿಯಮಾನುಸಾರ ಅಗತ್ಯವಿರುವ ದಾಖಲಾತಿಗಳನ್ನು ಪೂರ್ಣ ಪ್ರಮಾಣದಲ್ಲಿ ಜರೂರಾಗಿ ಸಲ್ಲಿಸುವಂತೆ ಆಯಾ ನಿಯಂತ್ರಣಾಧಿಕಾರಿಗಳಿಗೆ ಪತ್ರ/ ನೆನಪೋಲೆಗಳನ್ನು ಬರೆಯುವ ಮುಖಾಂತರ ಸಮರ್ಪಕವಾದ ಮತ್ತು ಪರಿಪೂರ್ಣವಾದ ದಾಖಲೆಗಳು ಸಲ್ಲಿಕೆಯಾದ ಕೂಡಲೇ ಸಕ್ಷಮ ನೇಮಕಾತಿ ಪ್ರಾಧಿಕಾರದ ಹಂತದಲ್ಲಿ ಕಡತಗಳನ್ನು ನಿಯಮಾನುಸಾರ ಪರಿಶೀಲಿಸಿಕೊಂಡು ಕಾಲಕಾಲಕ್ಕೆ ವಿಲೇವಾರಿ ಮಾಡಲಾಗುತ್ತಿದೆ.</td></tr>
<tr><td>(ಇ)</td><td>ಅನುಕಂಪ ಆಧಾರದ ಮೇಲೆ ನೌಕರಿ ಪಡೆದುಕೊಳ್ಳುವವರಿಗೆ ಇರುವ ಮಾನದಂಡನೆಗಳೇನು? (ವಿವರ ನೀಡುವುದು)</td><td>ಅನುಕಂಪದ ಆಧಾರದ ನೇಮಕಾತಿ ಪ್ರಕರಣಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಕಾಲ-ಕಾಲಕ್ಕೆ ಹೊರಡಿಸಲಾಗಿರುವ ಆದೇಶಗಳು ಮತ್ತು ನಿಯಮಗಳಲ್ಲಿನ ಮಾನದಂಡಗಳನ್ವಯ ಕ್ರಮವಹಿಸಲಾಗುತ್ತಿದ್ದು, ಅನುಬಂಧ-1ರಲ್ಲಿ ನೀಡಲಾಗಿದೆ.</td></tr>
</table>

ಸಂಖ್ಯೆ: ಆಕುಕ 314 ಹೆಚ್‌ಎಸ್‌ಎಂ 2025

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು